1 ಸ್ವಾವಲಂಬನ ಸಾಲದ 18 ಫಲಾನುಭವಿಗಳು ಯೋಜನೆ
2 ಶ್ರಮಶಕ್ತಿಯೋಜನೆಯಡಿ 04 ಫಲಾನುಭವಿಗಳು
ಸಾಲ ಸೌಲಭ್ಯವನ್ನು ಕಲ್ಪಿಸುವ ಗುರಿಯನ್ನು ನಿಗದಿಪಡಿಸಲಾಗಿದೆ.

658 (918) ಶ್ರೀ ಪಾಟೀಲ್ ಬಿ.ಆರ್. (ಆಳಂದ):-- ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) ಆಳಂದ ಸರ್ಕಾರಿ ಆಸ್ಪತ್ರೆಯ ಕಟ್ಟಡವು ಮೇಲ್ಛಾವಣಿ ಮಳೆ ನೀರಿನಿಂದಾಗಿ ಸೋರುತ್ತಿರುವ ವಿಷಯವು ಸರ್ಕಾರದ ಗಮನಕ್ಕೆ ಬಂದಿದೆಯೇ ;

ಆ) ಬಂದಿದ್ದಲ್ಲಿ, ರೋಗಿಗಳ ಸುರಕ್ಷತೆಗಾಗಿ ಸರ್ಕಾರ ಕೈಗೊಂಡಿರುವ ಕ್ರಮಗಳೇನು ?

ಶ್ರೀ ಆರ್ ಅಶೋಕ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು) :-

ಅ) ಬಂದಿದೆ.

ಆ) ಆಳಂದ ಸರ್ಕಾರಿ ಆಸ್ಪತ್ರೆಯ ಕಟ್ಟಡದ ಮಹಿಳಾ ರೋಗಿಗಳನ್ನು ಪುರುಷ ವಾರ್ಡಿನಲ್ಲಿ ಪ್ರತ್ಯೇಕ ಭಾಗದಲ್ಲಿ ತೊಂದರೆಯಾಗದಂತೆ ವ್ಯವಸ್ಥೆ ಮಾಡಲಾಗಿದೆ ಹಾಗೂ ಪ್ರಸಕ್ತ ಕೆ.ಎಫ್.ಡಬ್ಲ್ಯೂ ಯೋಜನೆಯಡಿಯಲ್ಲಿ ಹೊಸ ಆಸ್ಪತ್ರೆ ಕಟ್ಟಡ ನಿರ್ಮಾಣಗೊಂಡಿದ್ದು, ಸದರಿ ಆಸ್ಪತ್ರೆಯನ್ನು ಹಸ್ತಾಂತರಿಸಿದ ಕೂಡಲೇ ಎಲ್ಲಾ ರೋಗಿಗಳನ್ನು ಹೊಸ ಆಸ್ಪತ್ರೆ ಕಟ್ಟಡಕ್ಕೆ ಸ್ಥಳಾಂತರಿಸಲಾಗುವುದು.

659 (1134) ಶ್ರೀ ಪಾಟೀಲ್ ಬಿ.ಆರ್. (ಆಳಂದ) :- ಕಾರ್ಮಿಕ ಮತ್ತು ಅಲ್ಪಸಂಖ್ಯಾತರ ಕಲ್ಯಾಣ ಸಚಿವರು ದಯೆಯಿಟ್ಟು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ ?

ಅ) 2005 ಮತ್ತು 2006 ರಲ್ಲಿ ಹೊಸ ಖಾಸಗಿ ಕೈಗಾರಿಕಾ ತರಬೇತಿ ಕೇಂದ್ರಗಳು (ಟಿ.ಸಿ.) ಪ್ರಾರಂಭಕ್ಕೆ ಅರ್ಜಿಗಳನ್ನು ಆಹ್ವಾನಿಸಲು ಉದ್ಯೋಗ ಮತ್ತು ತರಬೇತಿ ಇಲಾಖೆಯಿಂದ ಅಧಿಸೂಚನೆಯನ್ನು ಹೊರಡಿಸಲಾಯಿತು ; ಅಧಿಸೂಚನೆಯ ಪ್ರತಿಗಳನ್ನು ಒದಗಿಸುವುದು ;

ಆ) ಅಧಿಸೂಚನೆಯನ್ನು ಹೊರಡಿಸದಿದ್ದರೂ ಸಹ ಉದ್ಯೋಗ ಮತ್ತು ತರಬೇತಿ ಇಲಾಖೆಯಲ್ಲಿ ಅರ್ಜಿಗಳನ್ನು ಸ್ವೀಕರಿಸಲಾಗಿದೆಯೇ ;

ಇ) ಹಾಗಿದ್ದಲ್ಲಿ, ಸ್ವೀಕರಿಸಿದ ಅರ್ಜಿಗಳ ಸಂಖ್ಯೆ ಪ್ರತಿ ಸಂಸ್ಥೆಯ ಪಾವತಿಸಿದ ಸಂಯೋಜನಾ ಶುಲ್ಕದ ವಿವರಗಳನ್ನು ನೀಡುವುದು ;

(ಈ) ಸ್ಥಾಯಿ ಸಮಿತಿಯು ಕೈಗೊಂಡ ಪ್ರವಾಸ ಕಾರ್ಯಕ್ರಮದ ಪ್ರತಿ ಹಾಗೂ ಪ್ರತಿ ಸ್ಥಾಯಿ ಸಮಿತಿಯು ಪರಿವೀಕ್ಷಣೆ ಕೈಗೊಂಡ ಟಿ.ಸಿ/ಘಟಕಗಳ ವಿವರಗಳನ್ನು ನೀಡುವುದು;